ಭಾರತೀಯ ಜನತಾ ಪಾರ್ಟಿ

11, ಅಶೋಕ ರಸ್ತೆ, ನವದೆಹಲಿ - 110001

**Phone-011-23005700, Fax-011-23005787**

ಜನವರಿ 19,2013

**ರಾಜ್ಯಸಭಾ ಉಪನಾಯಕ ಮತ್ತು ಮುಖ್ಯವಕ್ತಾರ ಶ್ರೀ ರವಿಶಂಕರ್ ಪ್ರಸಾದ್ ಹೇಳಿಕೆ**

ಕಾಂಗ್ರೆಸ್ ಪಕ್ಷ ತನ್ನ ಭವಿಷ್ಯದ ಕುರಿತು ಪ್ರಾಮಾಣಿಕ ಆತ್ಮಾವಲೋಕನಕ್ಕಿಂತ ಹೆಚ್ಚು ಚಿಂತಿತರಾಗಿರುವುದು ಜೈಪುರದಲ್ಲಿ ನಡೆದ ಚಿಂತನ ಶಿಬಿರದಲ್ಲಿ ಸ್ಪಷ್ಟವಾಗಿದೆ. ಕಾಂಗ್ರೆಸ್ ನೇತೃತ್ವದ ಯುಪಿಎ ಆಳ್ವಿಕೆಯ ಒಂಭತ್ತು ವರ್ಷಗಳು ಗತಿಸಿದರೂ, ಶ್ರೀಮತಿ ಸೋನಿಯಗಾಂಧಿಯವರು ಭಾರತೀಯ ಜನಸಂಖ್ಯೆಯ ಶೇಕಡ 50ರಷ್ಟಿರುವ(25 ವರ್ಷದೊಳಗಿನ ಯುವಜನರು) ಹಾಗೂ ಶೇಕಡ 65ರಷ್ಟಿರುವ(35 ವರ್ಷದೊಳಗಿನ ಯುವಜನರು) ಯುವಜನರ ಆಕಾಂಕ್ಷೆಗಳ ಕುರಿತು ಚಿಂತಿಸಲು ಕಾರಣವೇನು? ಬೆಲೆ ಏರಿಕೆ ಹಾಗೂ ಹಣದುಬ್ಬರದಿಂದ ಉಲ್ಬಣಿಸಿರುವ ಸಮಸ್ಯೆಗಳು ಬಡವರು ಮತ್ತು ಮಧ್ಯಮ ವರ್ಗದವರನ್ನು ಕಾಡುತ್ತಿರುವ ವಿಚಾರದಲ್ಲಿ ಚಿಂತಿಸಲು ಕಾರಣವೇನು?

ಸಾಮಾಜಿಕ ಭದ್ರತೆ ನೀಡುವ ಉದ್ದೇಶದಿಂದ ಯುವ ಶಿಕ್ಷಿತ ವರ್ಗಕ್ಕೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ನಡೆಸಲಾದ ಸಕಾರಾತ್ಮಕ ಕ್ರಮಗಳ ಕುರಿತು ಶ್ರೀಮತಿ ಗಾಂಧಿ ಉತ್ತರಿಸುವ ಅಗತ್ಯವಿದೆ. ಕೇವಲ 100 ದಿವಸಗಳಲ್ಲಿ ಹಣದುಬ್ಬರ ಹಾಗೂ ಬೆಲೆ ಏರಿಕೆಗೆ ಕಡಿವಾಣ ಹಾಕುವುದಾಗಿ ಭರವಸೆ ನೀಡಿದರೂ, ಕಳೆದ ನಾಲ್ಕೈದು ವರ್ಷಗಳಿಂದಲೂ ಜನಸಾಮಾನ್ಯರು ಅವುಗಳ ಬವಣೆಯಿಂದ ತಪ್ಪಿಸಿಕೊಳ್ಳದೆಯಿರಲು ಕಾರಣವೇನು ಎಂದು ಅವರು ಉತ್ತರಿಸಲಿ. ಇಂದು ಜಿಡಿಪಿ ಶೇಕಡ 5.3ರಷ್ಟು ತಗ್ಗಿದೆ, ಕೈಗಾರಿಕಾ ಉತ್ಪಾದನೆ ಹಾಗೂ ತಯಾರಿಕಾ ಕ್ಷೇತ್ರವು ತಳ ಕಚ್ಚಿವೆ. ರಫ್ತು–ಆಮದು ಬಿಗಡಾಯಿಸಿವೆ, ವಿದೇಶಿ ಹಾಗೂ ದೇಶಿ ಬಂಡವಾಳ ಹೂಡಿಕೆ ಪ್ರಮಾಣ ಕ್ಷೀಣಿಸಿದೆ, ಬಾರತದ ಅಭಿವೃದ್ಧಿ ಗಾಥೆಯನ್ನು ಸಂದೇಹದಿಂದ ನೋಡುವ ಸನ್ನಿವೇಶ ಉದ್ಭವಿಸಿದೆ. ಈ ಒಂದು ಶೋಚನೀಯ ಪರಿಸ್ಥಿತಿಯಲ್ಲಿ, ಶ್ರೀಮತಿ ಸೋನಿಯಾಗಾಂಧಿಯವರು ಯುವಜನರು, ಮಧ್ಯಮ ವರ್ಗದವರು ಹಾಗೂ ಜನಸಾಮಾನ್ಯರ ಆಕಾಂಕ್ಷೆಗೆ ಅನುಗುಣವಾಗಿ ಸ್ಪಂದಿಸುವ ಮಾತನ್ನು ಚುನಾವಣೆಗೆ ಕೇವಲ ಒಂದು ವರ್ಷದ ಮುನ್ನ ಆಡುತ್ತಿದ್ದಾರೆ.

ವ್ಯಾಪಕ ಭ್ರಷ್ಟಾಚಾರ, ತಾತ್ಕಾಲಿಕ ನಿರ್ಣಯ ಪದ್ಧತಿ, ನೀತಿ ವೈಕಲ್ಯ ಹಾಗೂ ಭ್ರಷ್ಟರನ್ನು ಕಾಪಾಡುವ ನಾಚಿಕೆಗೇಡಿನ ಯತ್ನಗಳು ಯುಪಿಎ ಸರ್ಕಾರದ ಮುಖ್ಯ ಲಕ್ಷಣಗಳಾಗಿವೆ ಎಂಬ ಸತ್ಯಸಂಗತಿಯನ್ನು ಶ್ರೀಮತಿ ಸೋನಿಯಗಾಂಧಿಯವರು ಸುಲಭವಾಗಿ ಮರೆತಂತಿದೆ. ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದಲ್ಲಿ ಉತ್ತಮ ಆಡಳಿತ ಬಲಿಯಾಗಿದೆ. ವ್ಯಾಪಕ ಭ್ರಷ್ಟಾಚಾರ ಸಂಭವಿಸಿದಾಗಲೆಲ್ಲಾ ಯುವಕರ ಭವಿಷ್ಯ ಒತ್ತೆಯಿಟ್ಟಂತಾಗುತ್ತದೆ.

ದೇಶದಲ್ಲಿ ಅಸಮಾಧಾನ ಮನೆಮಾಡಿದ್ದರೂ ಭಾಜಪ ಹಾಗೂ ಎನ್‌ಡಿಎ ಅಂಗ ಪಕ್ಷಗಳ ಆಳ್ವಿಕೆಯಿರುವ ರಾಜ್ಯಗಳು, ಉದಾಹರಣೆಗೆ ಗುಜರಾತ್, ಎಂಪಿ, ಚತ್ತೀಸ್‌ಗಢ್, ಬಿಹಾರ್ ಹಾಗೂ ಪಂಜಾಬ್ ರಾಜ್ಯ ಸರ್ಕಾರಗಳು ಉತ್ತಮ ಕಾರ್ಯವಹಿಸಿದ್ದು ಶೇಕಡ 10 ಅಥವಾ ಅದಕ್ಕೂ ಮಿಗಿಲಾದ ವೃದ್ಧಿದರವನ್ನು

ಸಾಧಿಸಿವೆ. ಮತ್ತೊಂದೆಡೆ ಅರ್ಥಿಕ ತಜ್ಞರಾದ ಪ್ರಧಾನಮಂತ್ರಿಗಳ ನೇತೃತ್ವದಲ್ಲಿ ನಮ್ಮ ರಾಷ್ಟ್ರವು ಶೇಕಡ 5.3g ಅತ್ಯಲ್ಪ ವೃದ್ಧಿದರದೊಂದಿಗೆ ಸಮಸ್ಯೆಗಳ ಆಗರವಾಗಿ ಪರಿವರ್ತನೆಗೊಂಡಿದೆ. ಉತ್ತಮ ಆಡಳಿತ ಉತ್ತಮ ಬದಲಾವಣೆಗೆ ಎಷ್ಟು ಮುಖ್ಯ ಎಂಬುದನ್ನು ಇದು ಪ್ರತಿಪಾದಿಸುತ್ತದೆ.

ರಾಹುಲ್ ಗಾಂಧಿಯವರಿಗೆ ಹೆಚ್ಚಿನ ಸ್ಥಾನಮಾನ ನೀಡುವುದರಿಂದಲೇ ಭಾರತೀಯ ಯುವಜನರ ಆಕಾಂಕ್ಷೆಗಳನ್ನು ಈಡೇರಿಸಲು ಸಾಧ್ಯವಿಲ್ಲ. ಭಾರತ ಹಾಗೂ ಭಾರತೀಯರ ಬಗ್ಗೆ ಏನೇನು ಕಾಳಜಿ ಇಲ್ಲ ಎಂಬುದು ಇದರಿಂದ ಖಚಿತವಾಗುತ್ತದೆ. ದೇಶದ ಜನತೆ ಬದಲಾವಣೆಯನ್ನು ಬಯಸಿದ್ದು, ಉತ್ತಮ ಆಡಳಿತ ನೀಡಿರುವ ದಾಖಲೆ ಹೊಂದಿರುವ ಭಾಜಪ ನೇತೃತ್ವದ ಎನ್‌ಡಿಎ ಸರ್ಕಾರವನ್ನು ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ತರುವುದು ಖಚಿತ.

(ಓ.ಪಿ.ಕ್ಹೊಲಿ)
ಮುಖ್ಯ ಕಚೇರಿ ಪ್ರಭಾರಿ